ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶನಿವಾರ ೩೧ನೆ ಡಿಸೆಂಬರ್ ೧೯೯೪, ಸಾಯನಸೌರ ಪುಷ್ಯ, ಶಕ ೧೯೧೭

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೫೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಎನ್.ಎಂ.ನಬಿ (ಸಣ್ಣ ಕೈಗಾರಿಕೆಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್.ವಿ. ದೇಶ್‌ಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಪರವಾಗಿ ಅವರ ಹೆಸರಿನಲ್ಲಿರುವ 1956ರ ಕಂಪನಿಗಳ ಕಾಯ್ದೆಯ 619 ಕಲಮಿನ ಮೇರೆಗೆ 1993-94ನೇ ಸಾಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 14ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

1. ಉದ್ಯಾನ ಎಕ್ಸ್‌ಪ್ರೆಸ್ ರೈಲು ಚಿನ್ನಸಂದ್ರ ಗೇಟ್ ಬಳಿ ಹಳಿ ತಪ್ಪಿ ಬಿದ್ದು ಅನೇಕ ಸಾವು ನೋವು ಉಂಟಾಗಿರುವುದರ ಬಗ್ಗೆ

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇವತ್ತು ಈ ರಾಜ್ಯದ ಜನರಿಗೆ ಆತಂಕ ತರುವಂಥ ಒಂದು ದುರ್ಘಟನೆ ನಡೆದಿದೆ. ಬೆಳಿಗ್ಗೆ ಉದ್ಯಾನ್ ಎಕ್ಸ್ ಪ್ರೆಸ್ ರೈಲು 7-15 ಕ್ಕೆ ಚನ್ನಸಂದ್ರ ಗೇಟ್ ಬಳಿ ಹಳಿತಪ್ಪಿ ಬಿದ್ದು ಅನೇಕ ಸಾವು ನೋವುಗಳಾಗಿದೆ ಎನ್ನುವಂಥ ಸುದ್ದಿ ಬರುತ್ತಿದೆ. ಅದಕ್ಕೋಸ್ಕರ ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಮಾಹಿತಿ ಇದ್ದರೆ ಎಷ್ಟು ಸಾವು ನೋವಾಗಿದೆ. ಸರ್ಕಾರದ ಕಡೆಯಿಂದ ಏನಾದರೂ ಗೃಹಮಂತ್ರಿ ಹೋಗಿದ್ದಾರೆ ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ, ಇದನ್ನು ನಮಗೆ ಬಹುಶಃ ತಿಳಿಸಿದರೆ ಅದರ ಬಗ್ಗೆ ನಾವು ಏನು ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ನಿರ್ಧರಿಸಬಹುದಾಗಿದೆ. ಅಸುನೀಗಿದವರಿಗೆ ಒಂದು ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗುತ್ತದೆ. ಮತ್ತು ನಮ್ಮ ಕರ್ತವ್ಯವನ್ನು ಮಾಡಬೇಕಾಗಿದೆ. ವಾಸ್ತವಿಕ ಸ್ಥಿತಿ ಏನು ಎಂಬುದನ್ನು ಸರ್ಕಾರ ಈ ಸದನಕ್ಕೆ ಹೇಳಬೇಕು. ಈ ದುರ್ಘಟನೆಯಲ್ಲಿ ಎಷ್ಟು ಜನ ಸತ್ತಿದ್ದಾರೆ ಅವರ ಮೆಡಿಕಲ್ ಟ್ರೀಟ್ ಮೆಂಟ್ ಹಾಗೂ ಇತರ ವ್ಯವಸ್ಥೆಗೆ ಸರ್ಕಾರ ವಿಶೇಷವಾದ ಗಮನವನ್ನು ಕೊಟ್ಟಿದೆಯೇ ಹಾಗೂ ಈ ಘಟನೆ ನಡೆಯುವುದಕ್ಕೆ ಕಾರಣವೇನು? ಇವುಗಳೆಲ್ಲದರ ಬಗ್ಗೆ ರೈಲ್ವೆ ಇಲಾಖೆಯನ್ನು ಏನಾದರೂ ಕಂಟಾಕ್ಟ್ ಮಾಡಿದ್ದೀರಾ ಎಂಬ ಬಗ್ಗೆ ಮಾಹಿತಿ ಏನಾದರೂ ಇದ್ದರೆ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಅತ್ಯಂತ ದುಃಖಕರವಾದಂತಹ ವಿಚಾರ. ತಮ್ಮ ಕೊಠಡಿಗೆ ಬಂದಾಗ ಇದರ ಬಗ್ಗೆ ನಾವು ನೀವೆಲ್ಲಾ ಚರ್ಚೆ ಮಾಡುತ್ತಿದ್ದೆವು. ಎಷ್ಟು ಜನ ಸಾವಿಗೆ ಈಡಾಗಿದ್ದಾರೆ. ಪರಿಸ್ಥಿತಿ

ಏನು? ಸ್ವಲ್ಪ ಹೆಚ್ಚು ಕಡಿಮೆ ಅದೇ ಸ್ಥಳದಲ್ಲಿ ಹಿಂದೆ ಇದೇ ತರಹ ಪರಿಸ್ಥಿತಿ ಆಗಿತ್ತು. ಈಗ ಸಾವಿಗೆ ಈಡಾದವರು ಎಷ್ಟು ಜನ? ಇದರ ಬಗ್ಗೆ ಸ್ಪಷ್ಟವಾದ ಚಿತ್ರ ಬೇಕು. ಸರ್ಕಾರಕ್ಕೆ ಏನು ವರದಿ ಬಂದಿದೆ? ಮತ್ತು ಅಲ್ಲಿ ಆ ಸ್ಥಳವನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರದ ಪರವಾಗಿ ಯಾರು ಹೋಗುತ್ತಿದ್ದಾರೆ? ಇವುಗಳಿಲ್ಲದರ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಒಂದು ವಿವರವನ್ನು ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ಎಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಬಂದ ತಕ್ಷಣ ಸ್ವತಃ ಅವರು ವರದಿ ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಅಪ್ಪಣೆ ಕೊಟ್ಟರೆ ನಾನೂ ಸ್ವತಃ ಹೋಗಿ ಬರುತ್ತೇನೆ.

ಅಧ್ಯಕ್ಷರು :ಹೋಗಿ ಬನ್ನಿ. ನಮ್ಮೆಲ್ಲರ ಪರವಾಗಿ ಹೋಗಿ ಬನ್ನಿ.

ಶ್ರೀ ಕಾಗೋಡು ತಿಮ್ಮಪ್ಪ : ಎಲ್ಲರೂ ಹೋಗಿ ಬರೋಣ.

ಅಧ್ಯಕ್ಷರು : ಸದನದ ಕಾರ್ಯಕಲಾಪಗಳು ನಡೆಯಬೇಕು. ಮಾನ್ಯ ತಿಮ್ಮಪ್ಪನವರದ್ದು ಇಂತಹದೇ ಸಲಹೆಗಳು. ನಿಮಗೆ ಏನಾದರೂ ಕೆಲಸ ಇದ್ದರೆ ಹೋಗಿ ಬನ್ನಿ . ನಾವೆಲ್ಲರೂ ಅಲ್ಲಿಗೆ ಹೋದರೆ ಅವರು ಆ ಕೆಲಸ ಬಿಟ್ಟು ನಮ್ಮನ್ನು ನೋಡುವ ಕೆಲಸ ಆಗುತ್ತದೆ. ಅದು ಬೇಡ. ನಿಮಗೆ ಏನಾದರೂ ಕೆಲಸ ಇದ್ದರೆ ಹೋಗಿ. ಅವರಿಗೆ ಏನಾದರೂ ಕೆಲಸ ಇದ್ದರೆ ಹೋಗಲಿ.

ಶ್ರೀ ಕಾಗೋಡು ತಿಮ್ಮಪ್ಪ : ನನಗೆ ಬೇರೆ ಏನೂ ಕೆಲಸ ಇಲ್ಲ.

ಅಧ್ಯಕ್ಷರು : ಹಾಗಾದರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ?

ಅಧ್ಯಕ್ಷರು : ತಾವು ತಮ್ಮ ಪಕ್ಷದ ಪರವಾಗಿ ಹೋಗಿ ಬರುವುದು ಇದ್ದರೆ ಹೋಗಿ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೋಗಿ ಬರಬೇಕಾದರೆ ಹೋಗಿ ಬರುತ್ತೇವೆ. ಯಾರನ್ನು ನೋಡಬೇಕೋ ನೋಡುತ್ತೇವೆ.

ಅಧ್ಯಕ್ಷರು : ಪಾರ್ಟಿ ರೆಪ್ರಸೆಂಟೆಟೀವ್ ಆಗಿ ಹೋಗಿ ಬನ್ನಿ. ಇನ್ನೂ ಸ್ಪೆಸಿಫಿಕ್ ಇನ್‌ಫರ್ಮೇಷನ್ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯರವರು ಮತ್ತು ಮುಖ್ಯಮಂತ್ರಿಗಳು ಹೋಗಿದ್ದಾರೆಂದು ಈಗಾಗಲೇ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಈಗ ಆ ಸ್ಥಳದಲ್ಲಿಯೇ ಇದ್ದಾರೆ. ಅಲ್ಲಿ ಏನು ಪರಿಸ್ಥಿತಿ ಇದೆ ಅದನ್ನು ನೋಡಿಕೊಂಡು ಬಂದು, ಇಲ್ಲಿ ತಿಳಿಸುತ್ತಾರೆ ಎಂದು ಹೇಳಿದ ಮೇಲೆ ಮತ್ತೆ ಪುನಃ ಹೋಗತಕ್ಕ ಅವಶ್ಯಕತೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಈಗ ಪುನಃ ಎಲ್ಲರೂ ಒಬ್ಬೊಬ್ಬರು ಪರ್ಮಿಷನ್ ತೆಗೆದುಕೊಂಡು ಹೋಗುತ್ತೇವೆ ಎಂದರೆ ಸದನವನ್ನು ಒಂದು ತಾಸು, ಎರಡು ತಾಸು ಅಜರ್ನ್ ಮಾಡಿ ಆಗ ಎಲ್ಲರೂ ಹೋಗಿ ನೋಡಿಕೊಂಡು ಬರೋಣ.

ಅಧ್ಯಕ್ಷರು : ತಮ್ಮ ಸಲಹೆ ಉಪಯುಕ್ತವಾಗಿದೆ. ಕೆಲಸ ಮುಗಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಹೇಳುವ ಉದ್ದೇಶ.

ಅಧ್ಯಕ್ಷರು : ಅವರು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಎದ್ದ ತಕ್ಷಣ ನಿಮಗೆ ಅಲರ್ಜಿ ಆಗುತ್ತದೆ.

ಅಧ್ಯಕ್ಷರು : ನಾನು ಆ ಕಡೆಗೆ ನೋಡುತ್ತಿಲ್ಲ, ನಿಮ್ಮ ಕಡೆಗೇ ನೋಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಉದ್ಯಾನ್ ಎಕ್ಸ್ ಪ್ರೆಸ್ ನಲ್ಲಿ ತಮಗೆ ಗೊತ್ತಿದ್ದ ಹಾಗೆ ಬೆಂಗಳೂರು - ಬಾಂಬೆ ಮತ್ತು ವಿಶೇಷವಾಗಿ ನಮ್ಮ ಗುಲ್ಬರ್ಗ, ಬೀದರ್, ರಾಯಚೂರು, ಬಳ್ಳಾರಿ, ಗುಂತಕಲ್ ಈ ಭಾಗದ ಪ್ಯಾಸೆಂಜರ್ಸ್ ಇರುತ್ತಾರೆ. ಅದಕ್ಕಾಗಿ ನಮ್ಮ ಕಳಕಳಿ ಏನೆಂದರೆ ಸದ್ಯದ ಪರಿಸ್ಥಿತಿ ಏನು ಇದೆ? ಎಷ್ಟು ಜನ ಅಪಘಾತದಲ್ಲಿ ತೀರಿಕೊಂಡಿದ್ದಾರೆ?/ ಅವರು ಮೆಡಿಕಲ್ ಏಡ್, ಫರ್ಸ್ಟ್ ಏಡ್ ಸಲುವಾಗಿ ಆಗಲಿ ಏನೇನು ಕಾರ್ಯಕ್ರಮ ಕೈಗೊಳ್ಳಲಾಗಿದೆ. ಅಥವಾ ಡಾಕ್ಟರ್ಸ್ ಅಲ್ಲಿ ಏನಾದರೂ ಹೋಗಿದ್ದಾರೋ ಹೇಗೆ ಇದರ ಬಗ್ಗೆ ಸ್ವಲ್ಪ ವಿವರ ತರಿಸಿಕೊಂಡು ಈ ಸದನಕ್ಕೆ ಹೇಳಿದರೆ ಒಂದು ಸ್ಪಷ್ಟವಾದ ಮಾಹಿತಿ ನಮಗೆ ಸಿಗುತ್ತದೆ. ನಾವೆಲ್ಲಾ ಹೋಗಿ ನೋಡಿಕೊಂಡು ಬರುತ್ತೇವೆ ಎಂದರೆ ಸುಮ್ಮನೆ ಲಿಫ್ಟ್ಸ್ ಸಿಂಪಡಿ ತೋರಿಸಿದಂತೆ ಆಗುತ್ತದೆ. ಆದರೆ ಆಕ್ಸ್ಯುಯಲಿ ಯಾರು ಮೃತ ಪಟ್ಟಿದ್ದಾರೆ ಯಾರ್ಯಾರಿಗೆ ಗಾಯಗಳಾಗಿವೆ ಎಂಬುದು ಗೊತ್ತಾದರೆ ನಾವು ಕೂಡ ಅವರ ರಿಲೇಟಿವ್ಸ್‌ಗಳು ಯಾರ್ಯಾರಿದ್ದಾರೆ ಅವರುಗಳನ್ನು ಕಂಟಾಕ್ಟ್ ಮಾಡಿ ಹೇಳಲಿಕ್ಕೆ ಅನುಕೂಲ ಆಗುತ್ತದೆ. ಅದಕ್ಕಾಗಿ ಅವರುಗಳು ಹೆಸರುಗಳು, ವಿವರಗಳು ಎಲ್ಲವನ್ನೂ ತರಿಸಿ ಅವರು ಬಂದ ಕೂಡಲೇ ಸದನದಲ್ಲಿ ಹೇಳಿದರೆ ಒಳ್ಳೆಯದಾಗುತ್ತದೆ ಎಂದು ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದು ಒಂದು ವ್ಯಾಲುಬಲ್ ಸಜೆಷನ್.

ಶ್ರೀ ಕಾಗೋಡು ತಿಮ್ಮಪ್ಪ : ಈವತ್ತು ಈ ಸದನದ ಕಾರ್ಯಕಲಾಪಗಳು ಮುಕ್ತಾಯಗೊಳ್ಳುವುದರಿಂದ ನನಗೆ ಈ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕು ಎಂಬ ಇಚ್ಛೆ ಇದೆ. ಆದರೆ ಇವತ್ತು ಅಂತಹ ದುರ್ಘಟನೆ ತೀರಾ ಹತ್ತಿರದಲ್ಲಿ ನಡೆದಾಗ ನಾವೆಲ್ಲ ಕುಳಿತು ಇಲ್ಲಿ ಚರ್ಚೆ ಮಾಡುವುದು ಹೇಗೆ? ಈಗ ನಮಗೂ ಕೂಡ ಅಲ್ಲಿಗೆ ಹೋಗಿ ಬರಬೇಕು ಎನ್ನತಕ್ಕ ಅಪೇಕ್ಷೆ ಇದೆ. ಅಲ್ಲಿಗೆ ಹೋದರೆ ನಾವು ಇಲ್ಲಿನ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ, ಆದ್ದರಿಂದ ಒಂದು ಗಂಟೆ ಮಟ್ಟಿಗೆ ಈ ಸದನವನ್ನು ಮುಂದಕ್ಕೆ ಹಾಕಿದರೆ ಯಾರ್ಯಾರಿಗೆ ಆಸಕ್ತಿ ಇದೆಯೋ ಅವರೆಲ್ಲರೂ ಹೋಗಿ ನೋಡಿಕೊಂಡು ಬರಬಹುದು. ನಮ್ಮ ಕೈಯಲ್ಲಿ ಏನು ಸಹಾಯ ಮಾಡುವುದಕ್ಕೆ ಆಗುತ್ತದೆ ಅದನ್ನು ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕೆಲವರು ಅಲ್ಲಿಗೆ ಹೋಗುವುದು ಕೆಲವರು ಇಲ್ಲಿ ಕುಳಿತುಕೊಂಡು ಕೆಲಸ ಮಾಡುವುದು ಸರಿಯಾಗುವುದಿಲ್ಲ. ನಮಗೆ ಅಲ್ಲಿಗೆ ಹೋಗುವ ಇಚ್ಛೆಯೂ ಇದೆ, ಈ ಕಾರ್ಯಕಲಾಪದಲ್ಲಿ ಭಾಗವಹಿಸಬೇಕು ಎಂಬ ಆಸೆಯೂ ಇದೆ. ಇದರಲ್ಲಿ ನಾನು ಯಾವುದನ್ನು ಚುನಾಯಿಸಿಕೊಳ್ಳಬೇಕು?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಎಲ್ಲಾ ಪಕ್ಷಗಳ ಪ್ರಮುಖರು ಒಬ್ಬೊಬ್ಬರು ಬೇಕಾದರೆ ಹೋಗಿ ಬರಲಿ. ನಾವು ಸರ್ಕಾರಕ್ಕೆ ಬೆಂಬಲ ಕೊಡೋಣ. ಸರ್ಕಾರ ಆ ನೊಂದ ಜನತೆಗೆ ಅಲ್ಲಿ ಏನೇನು ಅನುಕೂಲ ಮಾಡಿಕೊಡಬೇಕೋ ಅವುಗಳನ್ನೆಲ್ಲಾ ಮಾಡಿಕೊಡಲಿ. ಹಣ ಬಿಡುಗಡೆ ಮಾಡುವುದು ಅಥವಾ ಆಸ್ಪತ್ರೆಗಳಲ್ಲಿ ಅನುಕೂಲ ಮಾಡಿಕೊಡುವುದು ಮುಂತಾದ ಕಾರ್ಯಕ್ರಮಗಳಿಗೆ ಇಡೀ ಸದನದ ಸದಸ್ಯರೆಲ್ಲರೂ ಬೆಂಬಲವನ್ನು ಕೊಡೋಣ.

ಅನೇಕ ಮಾನ್ಯ ಸದಸ್ಯರುಗಳು ರಾಜ್ಯ ಸಮಸ್ಯೆಗಳನ್ನು ಮುಖ್ಯವಾಗಿ ಅವರವರ ಕ್ಷೇತ್ರದ ಸಮಸ್ಯೆಗಳನ್ನು ತೋಡಿಕೊಳ್ಳುವುದಕ್ಕೆ ಇವೊತ್ತು ಮಾತ್ರ ಅವಕಾಶವಿದೆ. ಆದ್ದರಿಂದ ಮುಖ್ಯಮಂತ್ರಿಗಳು, ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಹಾಗೂ ಕೆಲವರು ಪ್ರಮುಖರುಗಳಿರುವುದರಿಂದ ಅಲ್ಲಿಗೆ ಹೋಗಿ ಬಂದು ನಂತರ ಈ ಸದನದ ಅಭಿಪ್ರಾಯ ತೆಗೆದುಕೊಳ್ಳುವುದು ಸೂಕ್ತವೆಂದು ನನಗನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಒಬ್ಬೊಬ್ಬ ಮುಖಂಡರು ಹೋಗತಕ್ಕಂಥಾದ್ದು ಒಂದು ವಿಧಾನ. ಆದರೆ ಆ ದುರ್ಘಟನೆ ನಡೆದಿರತಕ್ಕಂಥ ಸ್ಥಳವನ್ನು ನಾವು ನಾಲ್ಕು ಜನ ನೋಡಿಕೊಂಡು ಬರುವುದು ಒಂದು ವಾರವಾದರೂ ಸಹ ಸದನವನ್ನು ಮುಂದಕ್ಕೆ ಹಾಕಿ ನಾವು ಅಲ್ಲಿಗೆ ಹೋಗಿಬಂದರೆ ಆ ಜನರ ಕಷ್ಟ-ಸುಖಗಳಿಗೆ ಸ್ಪಂದಿಸಿದಂತಾಗುತ್ತದೆ. ಹಾಗೂ ನಾವು ಎಂತಹ ಪರಿಸ್ಥಿತಿಯಲ್ಲಿದ್ದೇವೆಂಬುದೂ ಅರ್ಥವಾಗುತ್ತದೆ. ಆದುದರಿಂದ, ತಮ್ಮ ತೀರ್ಪನ್ನು ಬದಲಾವಣೆ ಮಾಡುವ ಉದ್ದೇಶ ನನಗಿಲ್ಲ. ತಾವು ಸದನವನ್ನು ಮುಂದೂಡಿ, ನಾವೆಲ್ಲರೂ ಹೋಗಿಬರೋಣವೆಂದರೆ ಆಗಬಹುದು. ದುರ್ಘಟನೆ ನಡೆಯಬಾರದಾಗಿತ್ತು, ನಡೆದುಹೋಗಿದೆ. ನಾವೆಲ್ಲರೂ ಹೋಗಿ ನೋಡಿಕೊಂಡು ಬರುವುದಕ್ಕೆ ಒಂದು ವ್ಯವಸ್ಥೆ ಬೇಕಾದರೆ ಮಾಡೋಣ.

ಒಬ್ಬ ಮಾನ್ಯ ಸದಸ್ಯರು : ಈಗ ಅಲ್ಲಿ ದುರ್ಘಟನೆಗೀಡಾದವರಿಗೆ ಪರಿಹಾರ ಕಾರ್ಯ ವ್ಯವಸ್ಥಿತವಾಗಿ ನಡೆಯಲು ಅನುಕೂಲ ಮಾಡಿಕೊಡುವುದಕ್ಕೆ ಹೆಚ್ಚು ಗಮನ ನೀಡುವುದು ಸೂಕ್ತವೆಂದು ನನಗನ್ನಿಸುತ್ತದೆ.

ಶ್ರೀ ಜೆ.ಹೆಚ್.ಪಟೇಲ್ : ದುರಂತದ ಬಗ್ಗೆ ಸ್ಪಷ್ಟವಾದ ಚಿತ್ರ ಇನ್ನೂ ನಮಗೆ ತಿಳಿದು ಬಂದಿಲ್ಲ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಸದನವನ್ನು ಮುಂದೂಡುವಂಥ ನಿಜವಾದ ಅವಶ್ಯಕತೆಯಿದ್ದರೆ ಮುಂದೂಡೋಣ. ನಾನು ಬೇಡವೆಂದು ಹೇಳುವುದಿಲ್ಲ. ಈ ಸದನದ ಸಭಾ ನಾಯಕರು ಸ್ಥಳಕ್ಕೆ ಹೋಗಿದ್ದಾರೆ. ಅವರು ಬಂದ ನಂತರ ಅಲ್ಲಿ ಏನು ನಡೆದಿದೆ ಮತ್ತು ಈ ಕುರಿತು ಏನು ಮಾಡಬೇಕೆನ್ನುವುದರ ಬಗ್ಗೆ ಮುಂದೆ ಯೋಚಿಸೋಣ.

ಒಬ್ಬ ಮಾನ್ಯ ಸದಸ್ಯರು : ಅಲ್ಲಿ ಬೆಳಿಗ್ಗೆ ಏಳೂವರೆ ಗಂಟೆ ಸಮಯದಲ್ಲಿ ದುರಂತ ನಡೆದಿದೆಯೆಂದು ಸುದ್ದಿ ಬಂದಿದೆ, ಈಗ ಹತ್ತೂ ಕಾಲು ಗಂಟೆಯಾಗುತ್ತಾ ಬರುತ್ತಿದೆ. ಈ ಮೂರು ಗಂಟೆಗಳ ಅವಧಿಯಲ್ಲಿ ಸರ್ಕಾರ ಪೊಲೀಸ್ ಇಲಾಖೆ ಮೂಲಕ ಇಲ್ಲವೇ ಮತ್ತಾವುದೇ ಮೂಲಕ ಸುದ್ದಿಯನ್ನು ತರಿಸಿಕೊಳ್ಳಬಹುದಾಗಿತ್ತು. ಈಗಾಲಾದರೂ ತತ್ ಕ್ಷಣ ಸುದ್ದಿ ತರಿಸಿದರೆ ಮಾನ್ಯ ಉಪಮುಖ್ಯಮಂತ್ರಿಯವರು ಹೇಳಿದಂತೆ ಹಾಗೂ ದುರಂತ ಯಾವ ಸ್ಥಳದಲ್ಲಿ ನಡೆದಿದೆಯೆಂಬುದರ ಕುರಿತು ವರದಿ ಕೊಟ್ಟರೆ ಸದನವನ್ನು ಸಾಧ್ಯವಾದರೆ ಮುಂದೂಡಬಹುದು.

ಶ್ರೀ ವಾಟಾಳ್ ನಾಗರಾಜ್ : ತಾವೇ (ಅಧ್ಯಕ್ಷರು) ಮುಖಂಡತ್ವ ವಹಿಸಿ ಈ ಸದನದ ಸದಸ್ಯರುಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗುವುದು ಒಳ್ಳೆಯ ಸಂಪ್ರದಾಯವಾಗುತ್ತದೆ.

ಅಧ್ಯಕ್ಷರು : ಅಲ್ಲಿ ಏನಾಗಿದೆಯೆಂಬುದರ ಕುರಿತು ಪೂರ್ಣ ಮಾಹಿತಿ ನಮಗೆ ಇನ್ನೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮೊದಲನೆಯ ವರದಿ ಪ್ರಕಾರ ಮೂರು ಜನ ಸತ್ತಿದ್ದಾರೆ ಎಂದು ತಿಳಿದುಬಂದಿದೆ.

ಅಧ್ಯಕ್ಷರು : ತಾವು ಅನುಭವದ ಹಿನ್ನೆಲೆಯಲ್ಲಿ ಆ ಮಾತನ್ನು ಹೇಳುತ್ತಿದ್ದೀರಿ. ಸರ್ಕಾರಕ್ಕೆ ಮಾಹಿತಿ ನಿಧಾನವಾಗಿ ತಲುಪುತ್ತದೆ ಮತ್ತು ಅಲ್ಲಿ ರೈಲ್ವೆ ಬೋಗಿಗಳು ಉರುಳಿವೆ ಎಂಬುದು ತಮಗೆ ಗೊತ್ತಿದೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ನನ್ನ ಊರಿನವರಾದ ಒಬ್ಬರು ಈ ರೈಲ್‌ನಲ್ಲಿ ಪ್ರಯಾಣ ಮಾಡಿಕೊಂಡು ಬಂದಂಥವರು ಹೇಳಿರುವಂತೆ ಬೆಳಿಗ್ಗೆ ಎಂಟು ಗಂಟೆಗೆ ಯಲಹಂಕ ಸಮೀಪ ಅಪಘಾತವಾಗಿದ್ದು, ಮೂರು ಬೋಗಿಗಳು ಉರುಳಿ ಬಿದ್ದಿದ್ದು 60-75 ಜನರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಯಾವುದೇ ಸಾವು ಸಂಭವಿಸಿಲ್ಲವೆಂದು ತಿಳಿಸಿದ್ದಾರೆ. ಮುಖ್ಯಮಂತ್ರಿಗಳು ಸ್ಥಳಕ್ಕೆ ಹೋಗಿದ್ದಾರೆ, ಅವರು ಬಂದ ನಂತರ ಏನೆಂದು ಹೇಳುತ್ತಾರೆ. ಅಲ್ಲಿಯವರೆಗೆ ಸದನವನ್ನು ಮುಂದೂಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಇದು ಸರ್ಕಾರದ ವರದಿಯೇ?

ಶ್ರೀ ಬಸವರಾಜ ರಾಯರೆಡ್ಡಿ : ನಾನು ಹೇಳುವುದು ಸರ್ಕಾರದ ವರದಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ನಡೆದಿರುವ ಅಪಘಾತದಲ್ಲಿ ಮೂರು ಜನರು ಸತ್ತಿದ್ದಾರೆ. ತಾವು ಏಕೆ ಹೀಗೆ ಮಾತನಾಡುತ್ತಿದ್ದೀರಿ? ನಿಮ್ಮ ಊರಿನವರು ಹೇಳಿರುವಂತೆ ಅವರು ತಪ್ಪಿಸಿಕೊಂಡು ಬಂದಿರಬಹುದು. ಆದರೆ, ಅಲ್ಲಿ ಹೆಣಗಳು ಬಿದ್ದಿರುವುದು ನಿಮ್ಮವರು ನೋಡಿಲ್ಲವೆಂದು ಕಾಣುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ : ಅದಕ್ಕೋಸ್ಕರ ಸದನವನ್ನು ಮುಂಡೂವುದು ಬೇಡ.

ಅಧ್ಯಕ್ಷರು : ಅವರು ಸೂಚನೆಯನ್ನು ನನಗೆ ಕೊಟ್ಟಿದ್ದಾರೆ. ನಾನು ನನ್ನ ವಿವೇಚನೆ ಉಪಯೋಗಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ : ಈ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಮೇಲಿಂದ ಮೇಲೆ ಇಂತಹ ಘಟನೆಗಳಾಗುತ್ತಿರುತ್ತವೆ. ಅದಕ್ಕೆ ಪರಿಹಾರ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ. ಘಟನೆ ನಡೆದ ಸ್ಥಳಕ್ಕೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಮಂತ್ರಿಗಳು ಹೋಗಿದ್ದಾರೆ. ಅವರು ಒಂದು ವಿಷಯ ತಿಳಿಸುವ ಮೂಲಕ ಸದನದ ಕಲಾಪ ನಡೆಯಲಿ.

2. ಹುಬ್ಬಳ್ಳಿಯಲ್ಲಿ ಹಾಲಿನಪುಡಿಯಲ್ಲಿ ಕಲಬೆರಕೆ

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕಲಬೆರಕೆಯ ವಿಚಾರವು ಎಲ್ಲಾ ಕ್ಷೇತ್ರಗಳಲ್ಲೂ ಒಂದು ರೀತಿಯ ಸಾಮಾನ್ಯವಾದ ವಿಚಾರವಾಗಿಬಿಟ್ಟಿದೆ. ನಿನ್ನೆ ಹುಬ್ಬಳ್ಳಿಯಲ್ಲಿ ಹಾಲಿನ ಪುಡಿಯಲ್ಲಿ ಕಲಬೆರಕೆಯಾಗಿರುವುದನ್ನು ಪತ್ತೆ ಮಾಡಿದ್ದಾರೆ. ಸುಮಾರು ಐದು ಲಕ್ಷ ರೂಪಾಯಿಗಳಷ್ಟು ಮೊತ್ತದ ದೊಡ್ಡ ದೊಡ್ಡ 440 ಟೀಲಗಳಲ್ಲಿ ಇಟ್ಟಿದ್ದ ಸುಮಾರು ಹನ್ನೊಂದು ಸಾವಿರ ಕೇಜಿಗಳಷ್ಟು ಹಾಲಿನ ಪುಡಿಯನ್ನು ಕಲಬೆರಕೆ ಮಾಡಿರತಕ್ಕದ್ದನ್ನು ವಶಕ್ಕೆ ತೆಗೆದುಕೊಂಡು ಕೆಲವು ವ್ಯಕ್ತಿಗಳನ್ನು ಬಂಧಿಸಿದ್ದಾರೆ ಎನ್ನತಕ್ಕ ಅಂಶ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಇಂದು ಬೆಳಿಗ್ಗೆ ಯಲಹಂಕದ ಹತ್ತಿರ ಸಂಭವಿಸಿರುವ ಉದ್ಯಾನ್ ಎಕ್ಸ್‌ಪ್ರೆಸ್ ರೈಲು ಅಪಘಾತದ ಸ್ಥಳಕ್ಕೆ ತಮ್ಮ ಅನುಮತಿಯನ್ನು ಪಡೆದು ಕಾಂಗ್ರೆಸ್ ಪಕ್ಷದವರಾದ ನಾವುಗಳೆಲ್ಲರೂ ಹೋಗುತ್ತೇವೆ.

ಅಧ್ಯಕ್ಷರು : ತಾವು ಮೊದಲೇ ಈ ಕೆಲಸ ಮಾಡಿದ್ದರೆ ಒಳ್ಳೆಯದಿತ್ತು. ದಯಮಾಡಿ ಹೋಗಿ.